ಸಾಕ್ಷಿಯನ್ನು ದಿನಾಂಕ 01.04.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಜಿ ಕೆ ಜಿ ರವರಿಂದಃ

1. ನನ್ನ ತಂದೆಯಾದ ರಂಗಸ್ವಾಮಿರವರಿಗೆ ನಾವು 6 ಜನ ಮಕ್ಕಳಿರುತ್ತೇವೆ, ಅವರುಗಳ ಹೆಸರು 1 ನೇ ಪ್ರತಿವಾದಿ, 2 ನೇ ಪ್ರತಿವಾದಿ, ನಿರ್ಮಲಾ, ಜಯಂತಿ, ಪುರುಷೋತ್ತಮ, ವಾದಿಯಾದ ನಾನು ಇರುತ್ತವೆ. ದಾವಾ ಸ್ವತ್ತನ್ನು ನಮ್ಮ ತಂದೆಯಾದ ರಂಗಸ್ವಾಮಿರವರು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ತಂದೆ ಜೀವಂತ ಇದ್ದಾಗ ನಾವೆಲ್ಲಾ ಅಂದರೆ ಮಕ್ಕಳೆಲ್ಲಾ ಒಟ್ಟು ಕುಟುಂಬದಲ್ಲಿದ್ದೆವು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ 30 ವರ್ಷಗಳಿಂದಲೂ ಬೇರೆ ಮನೆಯಲ್ಲಿ ವಾಸವಾಗಿರುತ್ತಾರೆ. ಉಳಿದವರೆಲ್ಲಾ ಒಟ್ಟಿಗೆ ಇದ್ದೆವು. 2 ನೇ ಪ್ರತಿವಾದಿ ಮದುವೆಗೂ ಮುಂಚಿತವಾಗಿ ಅಂದರೆ 1994 ರಿಂದಲೂ ಬೆಂಗಳೂರಿನಲ್ಲಿ ಸರ್ಕಾರಿ ಕೆಲಸ ಸಿಕ್ಕಿದ್ದರಿಂದ ಅಲ್ಲೇ ವಾಸವಾಗಿರುತ್ತಾರೆ. ಪ್ರತಿವಾದಿಗಳು ಈಗಲೂ ನಮ್ಮ ಜೊತೆ ಒಟ್ಟಿಗೆ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ.

2. ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ 2 ಭಾಗದ ಮನೆಗಳಿರುತ್ತವೆ ಎಂದರೆ ಸರಿ. ಒಂದು ಭಾಗದಲ್ಲಿ ಹಳೆ ಮನೆ ಇದ್ದು, ಇನ್ನೊಂದು ಭಾಗದಲ್ಲಿ ಖಾಲಿ ಜಾಗ ಇದ್ದು, ಆ ಖಾಲಿ ಜಾಗವನ್ನು ನಿಮ್ಮ ಕುಟುಂಬಸ್ಥರು 3 ಅಂತಸ್ಥಿನ ಕಟ್ಟಡವನ್ನು ಕಟ್ಟಿಸಿದ್ದು, ನೆಲಮಹಡಿಯಲ್ಲಿ ನೀವು ವಾಸವಾಗಿದ್ದು, 1 ಮತ್ತು 2 ನೇ ಮಹಡಿಯ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದು, 3 ನೇ ಮಹಡಿಯಲ್ಲಿ 1 ನೇ ಪ್ರತಿವಾದಿ ವಾಸವಾಗಿರುತ್ತಾರೆ ಮತ್ತು ಹಳೆ ಮನೆಯಲ್ಲಿ ಈಗಲೂ 2 ನೇ ಪ್ರತಿವಾದಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಖಾಲಿ ಇದ್ದ ಜಾಗದಲ್ಲಿ ನಾನು ಮತ್ತು ಪುರಷೋತ್ತಮರವರು ಬ್ಯಾಂಕಿನಲ್ಲಿ ಸಾಲ ಪಡೆದು 3 ಅಂತಸ್ಥಿನ ಮಹಡಿಯನ್ನು ಕಟ್ಟಿಸಿ ನೆಲಮಹಡಿಯಲ್ಲಿ ನಾನು ವಾಸವಾಗಿದ್ದು, ಇನ್ನೊಳಿದ 2 ಮಹಡಿಯ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದು, ಒಂದು ಮನೆಯನ್ನು ಉಪಕರಣಗಳನ್ನು ಇಟ್ಟುಕೊಳ್ಳಲು ಬಿಟ್ಟಿರುತ್ತೇವೆ ಎಂದು ಹೇಳುತ್ತಾರೆ.

This is a True Copy of the Court Records Online. Authenticated @ districts.ecourtsindia.com/cnr/KAMS030036682021/truecopy/order-7.pdf

www.ecourtsindia.com

3. ನನ್ನ ತಂದೆಯವರು 1965 ನೇ ಇಸವಿಯಲ್ಲಿ ದಾವಾ ಷೆಡ್ಯೂಲ್ ಸ್ವತ್ತಿನ ಖಾಲಿ ಜಾಗವನ್ನು ಖರೀದಿಸಿ, ಅಂಚಿನ ಮನೆಯನ್ನು ಕಟ್ಟಿಸಿರುತ್ತಾರೆ ಎಂದರೆ ಸರಿ. ನನ್ನ ತಂದೆ ರೈಲ್ವೇ ಇಲಾಖೆ ನೌಕರ ಎಂದರೆ ಸರಿ. ನನ್ನ ತಂದೆ ತಾಯಿ ಹೆಸರಿಗೆ 1973 ರಲ್ಲಿ ದಾವಾ ಷೆಡ್ಯೂಲ್ ಸ್ವತ್ತು ಮಕ್ಕಳ ಭವಿಷ್ಯಕ್ಕಾಗಿ ಎಂದು ವ್ಯವಸ್ಥಾ ಪತ್ರವನ್ನು ಬರೆಯಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೇವಲ ತಾಯಿ ಹೆಸರಿಗೆ ವ್ಯವಸ್ಥಾ ಪತ್ರವನ್ನು ಬರೆಯಿಸಿಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ವ್ಯವಸ್ಥಾ ಪತ್ರವನ್ನು ನಾನು ಓದಿರುತ್ತೇನೆ. ಸದರಿ ವ್ಯವಸ್ಥಾ ಪತ್ರದಲ್ಲಿ ನಿನಗೂ ಹಾಗೂ ನಿನ್ನ ಮಕ್ಕಳ ಮುಂದಿನ ಭವಿಷ್ಯಕ್ಕಾಗಿ ಎಂದು ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ನಂತರ 2 ನೇ ಪ್ರತಿವಾದಿ ನನ್ನ ಮತ್ತು ಇತರ ಕುಟುಂಬಸ್ಥರ ವಿರುದ್ಧ ಪಾಲು ಕೇಳಿ ದಾವೆಯನ್ನು ದಾವೆ ಸಂಖ್ಯೆ 291/2021 ಎಂಬುದನ್ನು ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯನ್ನು ನಿಮ್ಮ ತಾಯಿಗೆ ವ್ಯವಸ್ಥಾ ಪತ್ರದ ಮುಖಾಂತರ ಸಂಪೂರ್ಣ ಅಧಿಕಾರ ಇಲ್ಲದಿದ್ದರೂ ದಾನ ಪತ್ರ ಬರೆಯಿಸಿಕೊಂಡು ಪ್ರತಿವಾದಿಗೆ ಪಾಲು ಕೊಡದೇ ಇದ್ದುದರಿಂದ ಪಾಲು ಕೇಳಿ ಹೂಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮನೆಯ ಟೆಲಿಫೋನ್ ನ ಬಿಲ್ 2 ನೇ ಪ್ರತಿವಾದಿಯ ಹೆಸರಿಗೆ ಬರುತ್ತದೆ ಎಂದರೆ ಸರಿಯಲ್ಲ.

4. 1 ನೇ ಪ್ರತಿವಾದಿ ಮದುವೆಯಾಗಿರುವುದಿಲ್ಲ ಮತ್ತು ಅಂಗವಿಕಲ ಎಂದರೆ ಸರಿ. 1 ನೇ ಪ್ರತಿವಾದಿ ನಿರುದ್ಯೋಗಿ ಇದ್ದು, ನಿಮ್ಮ ತಾಯಿ ಜೊತೆ ವಾಸವಾಗಿರುತ್ತಾರೆ ಎಂದರೆ ಸಾಕ್ಷಿ 2 ನೇ ಪ್ರತಿವಾದಿಯ ಜೊತೆ ವಾಸವಾಗಿರುತ್ತಾರೆ ಎಂದು ಹೇಳುತ್ತಾರೆ. ಸಾಕ್ಷಿಗೆ ಒಂದು ಫೋಟೋ ತೋರಿಸಿ ನೀವು ವಾಸವಾಗಿರುವ ಮನೆಯ 3 ನೇ ಮಹಡಿಯಾಗಿರುತ್ತದೆ ಎಂದು ತೋರಿಸಿದ್ದು, ಸಾಕ್ಷಿ ಹೌದು ಎಂದು ಗುರುತಿಸಿದ್ದರಿಂದ ಆ ಫೋಟೋವನ್ನು ನಿಡಿ-1 ಎಂದು ಕನ್ಫಂಟ್ ಮಾಡಲಾಯಿತು. ಸಾಕ್ಷಿಗೆ ಒಂದು ಫೋಟೋ ತೋರಿಸಿ ಅದರಲ್ಲಿರುವವರು ತಾಯಿ, ಅಣ್ಣ, 2 ನೇ ಪ್ರತಿವಾದಿಯ ಮಗ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಆ ಫೋಟೋವನ್ನು ನಿಡಿ-2 ಎಂದು ಕನ್ಫಂಟ್ ಮಾಡಲಾಯಿತು. ಸಾಕ್ಷಿಗೆ ಮತ್ತೊಂದು ಫೋಟೋ

This is a True Copy of the Court Records Online. Authenticated @ districts.ecourtsindia.com/cnr/KAMS030036682021/truecopy/order-7.pdf

ತೋರಿಸಿ ಆ ಫೋಟೋವನ್ನು ನಿಮ್ಮ ತಾಯಿಯ ಜೊತೆ ತೆಗೆಯಿಸಿಕೊಂಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಆ ಫೋಟೋವನ್ನು ನಿಡಿ-3 ಎಂದು ಕನ್ಫ್ರಂಟ್ ಮಾಡಲಾಯಿತು.

5. ನಾನು ಕೈಗಾರಿಕ ಭದ್ರತಾ ಪಡೆಯಲ್ಲಿ ಆರಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಮೈಸೂರಿನ ಆರ್ ಬಿ ಐ ಕಛೇರಿಯಲ್ಲಿ 7 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಅದಕ್ಕಿಂತ ಮುಂಚೆ ಬೆಂಗಳೂರಿನಲ್ಲಿ 1 ವರ್ಷ, ಅದಕ್ಕಿಂತ ಮುಂಚೆ ಹಾಸನದಲ್ಲಿ 7 ವರ್ಷ ಕೆಲಸ ಮಾಡಿರುತ್ತೇನೆ.

6. ಇನ್ನೊಬ್ಬ ಸಹೋದರನಾದ ಪುರಷೋತ್ತಮರವರಾದ ಮೈಸೂರಿನ ಆರ್ ಬಿ ಐ ಕಛೇರಿಯಲ್ಲಿ ಕೈಗಾರಿಕ ಭದ್ರತಾ ಪಡೆಯಲ್ಲಿ ಆರಕ್ಷಕನಾಗಿ ಕೆಲಸ ಮಾಡುತ್ತಿದ್ದಾನೆ. ಸದರಿ ವ್ಯಕ್ತಿ ಮಂಗಳೂರು ಮತ್ತು ಮಧ್ರಾಸ್ ನಲ್ಲಿ ಕೆಲಸ ಮಾಡಿರುತ್ತಾರೆ ಎಂದರೆ ಸರಿ. ಹಾಸನದಲ್ಲಿ ಕೆಲಸ ಮಾಡುತ್ತಿದ್ದಾಗ ಹಾಸನದಲ್ಲೇ ವಾಸವಾಗಿದ್ದೀರಾ ಎಂದರೆ ಸಾಕ್ಷಿ ಇಲ್ಲ ಮೈಸೂರಿನಿಂದ ಓಡಾಡಿರುತ್ತೇನೆ ಎಂದು ಹೇಳುತ್ತಾರೆ.

(ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.)

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಓ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಮೈಸೂರು.

This is a True Copy of the Court Records Online. Authenticated @ districts.ecourtsindia.com/cnr/KAMS030036682021/truecopy/order-7.pdf